ವಡೇನ್‌ಬೈಲ್ ಸುರಂಗಮಾರ್ಗದ ದುರಸ್ತಿ

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಶಿಶಿ) :—

೧೭. (೩೦).—ಲೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ಶರಾವತಿಯಲ್ಲಿ ಕೆಟ್ಟು ಹಾಳಾಗಿರುವ ವಡೇನ್‌ಬೈಲ್ ಸುರಂಗ ಮಾರ್ಗದ ಹಾದಿಗೆ ದುರಸ್ತು ಮಾಡಲು ಅಂದಾಜು ಮಾಡಿದ ಹಣವೆಷ್ಟು ;

(ಆ) ಅಲ್ಲಿ ನಡೆದಿರುವ ಕಟ್ಟೆ ಕಾಮಗಾರಿ ಕೆಲಸಗಳಿಗೆ ಯಾರು ಜವಾಬ್ದಾರರು ಮತ್ತು ಯಾರು ಹೊಣೆಗಾರರು ;

(ಇ) ಈ ಬಗ್ಗೆ ತಜ್ಞರ ಸಮಿತಿಯ ಅಭಿಪ್ರಾಯವೇನು ;

(ಈ) ಈ ದುರಸ್ತಿ ಕಾರ್ಯಕ್ಕೆ ಸರಕಾರ ಮಾಡಿರುವ ಪೂರ್ವಭಾವಿ ಸಿದ್ಧತೆಗಳಾವುವು ;

(ಉ) ಈ ಬಗ್ಗೆ ನ್ಯಾಯಾಂಗ ತನಿಖೆ ನಡೆಸಲು ಸರ್ಕಾರ ಆಲೋಚಿಸಿದೆಯೇ ? ಹಾಗಾದರೆ ಸರ್ಕಾರದ ನಿರ್ಧಾರವೇನು ಮತ್ತು ಆ ತನಿಖೆ ಯಾವಾಗ ಆರಂಭವಾಗುತ್ತದೆ ?

Sri H. M. CHANNABASAPPA.—(The Minister for Public Works and Electricity).—

ಉತ್ತರ :—

(*a*) Cost of repairs to the tunnel No. 1 is estimated at Rs. 3 Lakhs.

(*b*) The question of locating failure in duties on the part of the Officers/Officials and of fixing responsibilities on the concerned is under examination.

(*c*) Report of the three experts deputed by the Govt. of India for observation during the period of repairs is still awaited.

(*d*) The repairs to the tunnel were carried out from 19-8-1972 to 3-9-1972 by having a short shut-down of the units

(*e*) The entire matter is under consideration.

ನಗರ ಆಸ್ತಿಗಳ ಮೇಲೆ ಮಿತಿಹಾಕಲು ಶಾಸನ ರಚನೆ

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿರಸಿ) :—

೧೮. (೩೧).—ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ವಿಧಾನಸಭೆಯ ಮುಂದಿನ ಅಧಿವೇಶನದಲ್ಲಿ ನಗರ ಆಸ್ತಿಮಿತಿ ಹಾಕುವ ಬಗ್ಗೆ ಶಾಸನ ರಚನೆ ಮಾಡಲು ಸೂಕ್ತ ಮಸೂದೆ ತರಲಾಗುವುದೆ ;